ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಯವರ ಪರವಾಗಿ): ಮಾನ್ಯ ಉಪಾಧ್ಯಕ್ಷಿಣಿಯವರೆ, ವಿಧಾನಸಭಾ ಸದಸ್ಯರಾದ ಶ್ರೀ ಎಂ. ಸಿದ್ಧಮಾದಯ್ಯನವರು ಕಬಿನಿ ನಾಲೆಯ 38ನೇ ವಿತರಣಾ ನಾಲೆ (ಚಾಮರಾಜನಗರ ತಾಲ್ಲೂಕಿನ ಸಂತೆಮಾರನಹಳ್ಳಿ ಬಳಿ) ಮತ್ತು 50ನೇ ವಿತರಣಾ ನಾಲೆ (ಎಳಂದೂರು ತಾಲ್ಲೂಕಿನ ಹೊನ್ನೂರು ಬಳಿ) ಈ ಎರಡು ವಿತರಣಾ ನಾಲೆಗಳ ಕಾಮಗಾರಿಗಳು ಸುವ್ಯವಸ್ಥೆಯಲ್ಲಿ ಇಲ್ಲದೇ ಇರುವುದರಿಂದ ಸದರಿ ನಾಲೆಗಳ ಕೆಳಗಿನ ಅಚ್ಚುಕಟ್ಟು ಪ್ರದೇಶದ ರೈತರುಗಳು ತೊಂದರೆಗೆ ಒಳಪಟ್ಟಿರುವುದಾಗಿಯೂ ಮತ್ತು ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ಸಲ್ಲಿಸಿದ್ದರೂ ಸಹ ಇದರ ಬಗ್ಗೆ ಕ್ರಮವನ್ನು ಕೈಗೊಂಡಿರುವುದಿಲ್ಲವೆಂದು ಪ್ರಸ್ತಾಪಿಸಿರುತ್ತಾರೆ.

ಈ ವಿಷಯವು ಸರ್ಕಾರಕ್ಕೆ ಗಮನಕ್ಕೆ ಬಂದಿದೆ. ಈ ಕಾಮಗಾರಿಗಳಿಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಬಗ್ಗೆ ತುರ್ತು ಕ್ರಮ ಕೈಗೊಂಡು ಪರಿಸ್ಥಿತಿಯನ್ನು ಸರಿಪಡಿಸಬೇಕಾಗಿ ಸೂಚನೆ ನೀಡಲು ಮುಖ್ಯ ಇಂಜಿನಿಯರ್, ನೀರಾವರಿ (ದಕ್ಷಿಣ) ಮೈಸೂರು, ಅವರಿಗೆ ಆದೇಶ ನೀಡಲಾಗಿದೆ.

(3) ಟಿ. ನರಸೀಪುರ ತಾಲ್ಲೂಕಿನ ಬನ್ನೂರಿನಲ್ಲಿ ಪರಿಶಿಷ್ಟ ಜಾತಿಯವರ ಜೀವನಕ್ಕೆ ಉದ್ಯೋಗ.

ಶ್ರೀ ಕೆ. ಸಿದ್ಧಯ್ಯ: ಮಾನ್ಯ ಅಧ್ಯಕ್ಷರೇ ಮೈಸೂರು ಜಿಲ್ಲೆ ಟಿ. ನರಸೀಪುರ ತಾಲ್ಲೂಕು ಬನ್ನೂರು ಟೌನ್‌ನಲ್ಲಿ ವಾಸವಾಗಿರುವ ಪರಿಸಿಷ್ಟ ಜಾತಿಯವರ ಮೇಲೆ ಇತರ ಕೋಮಿನವರು ಸಾಮಾಜಿಕ ಬಹಿಷ್ಕಾರವನ್ನು ಹಾಕಿರುವುದಾಗಿ ಸದರಿ ಜಿಲ್ಲಾ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಸಮಾಜ ಕಲ್ಯಾಣ ಸಮಿತಿಗೆ ಬಂದಿರುವ ವರದಿಯಿಂದ ತಿಳಿದು ಬಂದಿದೆ. ಈ ಬಹಿಷ್ಕಾರದ ಪರಿಣಾಮವಾಗಿ ಭೂಹೀನರು ಮತ್ತು ರೈತ ಕಾರ್ಮಿಕರು ಆಗಿರುವ ಮತ್ತು ತಮ್ಮ ನಿತ್ಯ ಜೀವನಕ್ಕೆ ಕೂಲಿನಾಲಿಗಾಗಿ ಪರರನ್ನೇ ಅವಲಂಬಿಸಿರುವ ಇವರಿಗೆ ಹಸಿವು ಮತ್ತು ಕಿರುಕುಳ ಉಂಟಾಗಿರುತ್ತದೆ.

ಈ ಬಗ್ಗೆ ಸರ್ಕಾರವು ಇದರ ಪರಿಹಾರಾರ್ಥವಾಗಿ ತೆಗೆದುಕೊಂಡಿರುವ ಕಾರ್ಯಗಳು ಮತ್ತು ಮುಂದೆ ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಹೇಳಿಕೆಯೊಂದನ್ನು ಸರ್ಕಾರವು ನೀಡಬೇಕಾಗಿ ಕೋರುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಅಧ್ಯಕ್ಷರೇ ಮಾನ್ಯ ಸಮಾಜಕಲ್ಯಾಣ ಮಂತ್ರಿಗಳ ಗಮನಕ್ಕೆ ಈ ವಿಚಾರವನ್ನು ತಂದು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ತಿಳಿಸುತ್ತೇನೆ.

(4) ಬೆಳ್ತಂಗಡಿ ಟೌನ್‌ಗೆ ಕುಡಿಯುವ ನೀರಿನ ಸರಬರಾಜು ಮಾಡಲು ಒತ್ತಾಯ.

ಶ್ರೀ ಕೆ. ಗಂಗಾಧರ ಗೌಡ: ಮಾನ್ಯ ಅಧ್ಯಕ್ಷರೇ ಬೆಳ್ತಂಗಡಿ ಪಟ್ಟಣದಲ್ಲಿ ಕುಡಿಯುವ ನೀರಿನ ಯೋಜನೆ ಮಂಜೂರು ಆಗಿ ಹಲವು ವರ್ಷಗಳು ಸಂದರೂ ಯೋಜನೆ ಪೂರ್ತಿಯಾಗಿಲ್ಲ. ಕುಡಿಯುವ ನೀರಿನ ಬವಣೆಯಿಂದ ಜನರು ಬಳಲುತ್ತಿದ್ದಾರೆ. ನೀರಿನ ಮೂಲವಿಲ್ಲದೆ ಲಕ್ಷಾಂತರ ರೂಪಾಯಿ ಖರ್ಚುಮಾಡಿ ತಯಾರಿಸಿದ ಯೋಜನೆ ಪೂರ್ತಿಯಾದರೂ ಬೇಸಿಗೆಯಲ್ಲಿ ನೀರು ದೊರಕದೆ ನೀರಿನ ಸಮಸ್ಯೆ ಬಗೆ ಹರಿಯದು. ಕಳೆದ ಅಸೆಂಬ್ಲಿಯಲ್ಲಿ ಎಚ್.ಯು.ಡಿ. ಮಂತ್ರಿಗಳು ಬೋರ್‌ವೆಲ್‌ಗಳನ್ನು ತೋಡಿ ಪಂಪ್ ಅಳವಡಿಸಿ ನೀರು ಸರಬರಾಜು ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರೂ ಯಾವುದೇ ಕೆಲಸ ಆರಂಭವಾಗಿಲ್ಲ. ಅಲ್ಲದೆ ನೀರಿನ ಸಮಸ್ಯೆಯೂ ಬಗೆಹರಿಯಲಿಲ್ಲ. ಈಗ ಬೇಸಿಗೆಯಾದ್ದರಿಂದ ಆದಷ್ಟು ಶೀಘ್ರವಾಗಿ ಬೋರ್‌ವೆಲ್‌ಗಳನ್ನು ತೋಡಿಸಿ ನೀರು ಒದಗಿಸಬೇಕಾಗಿಯೂ, ನೀರು ಸರಬರಾಜು ಯೋಜನೆಯನ್ನು ಇದೇ ವರ್ಷ

ಪೂರ್ತಿಗೊಳಿಸಬೇಕಾಗಿಯೂ, ನೀರು ಸರಬರಾಜು ಯೋಜನೆಯನ್ನು ಇದೇ ವರ್ಷ ಪೂರ್ತಿಗೊಳಿಸಬೇಕಾಗಿಯೂ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ.

ಶ್ರೀ ವಿ. ಮುನಿಯಪ್ಪ: (ರೇಷ್ಮೆ ಖಾತೆಯ ರಾಜ್ಯಸಚಿವರು) : ಮಾನ್ಯ ಅಧ್ಯಕ್ಷರೇ ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರ ಪರವಾಗಿ ಈ ಹೇಳಿಕೆಯನ್ನು ಕೋರಬಯಸುತ್ತೇನೆ.

ಬೆಳ್ತಂಗಡಿ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆಯನ್ನು ಈ ಪಟ್ಟಣದ ಹತ್ತಿರದಲ್ಲಿರುವ ಒಂದೇ ಒಂದು ನೀರಿನ ಮೂಲವಾದ ಬೆಳ್ತಂಗಡಿ ನದಿ(ಹೊಳೆ)ಯನ್ನು ಅವಲಂಭಿಸಿ, 1985ರಲ್ಲಿ 22.00 ಲಕ್ಷ ರೂ.ಗಳ ಅಂದಾಜಿನಲ್ಲಿ ಮಂಜೂರು ಮಾಡಲಾಗಿದೆ. ಈ ಯೋಜನೆಯನ್ನು ನಂತರ 48.50 ಲಕ್ಷ ರೂ.ಗಳಿಗೆ ಜಲಶುದ್ಧೀಕಾರ ಮತ್ತು ಇತರ ಕೆಲಸಗಳನ್ನು ಅಳವಡಿಸಿ ಮಾರ್ಪಡಿಸಲಾಗಿದೆ. ಈ ಯೋಜನೆಯ ಅಡಿಯಲ್ಲಿ ಜಲಶುದ್ಧೀಕರಣಗಾರದ ಕಾಮಗಾರಿಯನ್ನು ಬಿಟ್ಟು ಉಳಿದೆಲ್ಲಾ ಕೆಲಸಗಳನ್ನು ಪೂರ್ಣಗೊಳಿಸಲಾಗಿದೆ. ಜಲಶುದ್ಧೀಕರಣಗಾರ ಕಾಮಗಾರಿಗೆ ಗುತ್ತಿಗೆದಾರರನ್ನು ನೇಮಿಸಿ ಕೆಲಸವನ್ನು ಪ್ರಾರಂಭಿಸಲಾಗುತ್ತಿದೆ.

30 ಅಶ್ವ ಶಕ್ತಿಯ ಎರಡು ಪಂಪುಗಳನ್ನು ಕಚ್ಚಾ ನೀರನ್ನು ಪಂಪುಮಾಡಲು ಚಾಲೂ ಮಾಡಲಾಗಿದೆ. ಈಗ ನೀರು ಎತ್ತರದ ಪ್ರದೇಶಗಳಿಗೆ ಶುದ್ಧೀಕರಣಗಾರದ ಕೆಲಸ ಮುಗಿದು ಶುದ್ಧ ನೀರನ್ನು ಪಂಪು ಮಾಡಿದಲ್ಲಿ ಈ ಎತ್ತರ ಪ್ರದೇಶಗಳಿಗೆ ನೀರನ್ನು ಒದಗಿಸಬಹುದಾಗಿದೆ. ಸರ್ಕಾರವು ತನ್ನ ಆದೇಶದ ಸಂಖ್ಯೆ: ಆರ್‌ಡಿ. 122 ಜಿಎನ್ 5:90 ದಿನಾಂಕ: 23-3-91ರಲ್ಲಿ 10.00 ಲಕ್ಷ ರೂ.ಗಳನ್ನು ದಕ್ಷಿಣ ಕನ್ನಡ ಜಿಲ್ಲೆಯ ಅಭಾವ ಪರಿಹಾರದಡಿಯಲ್ಲಿ ಮಂಜೂರು ಮಾಡಿ ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ ಇವರಿಗೆ ಬಿಡುಗಡೆ ಮಾಡಿದೆ. ಜಿಲ್ಲಾಧಿಕಾರಿಯವರು ಬೆಳ್ತಂಗಡಿ ಪಟ್ಟಣದಲ್ಲಿ ಕೊಳವೆ ಬಾವಿಗಳನ್ನು ಕೊರೆಯಲು ಹಣ ಒದಗಿಸಿದಲ್ಲಿ ಈ ಕೆಲಸವನ್ನು ಕೈಗೊಳ್ಳಲಾಗುವುದು.

ಹಾಲಿ ಈ ಪಟ್ಟಣದಲ್ಲಿ ಒಟ್ಟು 8 ಕೊಳವೆ ಬಾವಿಗಳಿದ್ದು, ಅವುಗಳಿಗೆ ಕೈಪಂಪುಗಳನ್ನು ಜೋಡಿಸಲಾಗಿದೆ.

(5) ಬೆಂಗಳೂರಿನ ಶ್ರೀರಾಂಪುರದಲ್ಲಿರುವ ವಿದ್ಯುತ್ ಚಿತಾಗಾರದಿಂದ ಹೊರಬರುವ ಹೊಗೆಯಿಂದ ಸುತ್ತ ಮುತ್ತಲಿನ ಜನರಿಗೆ ತೊಂದರೆ.

ಶ್ರೀ ಕೆ. ಲಕ್ಕಣ್ಣ: ಮಾನ್ಯ ಅಧ್ಯಕ್ಷರೇ ಬೆಂಗಳೂರು ರಾಜಾಜಿನಗರ ಕ್ಷೇತ್ರಕ್ಕೆ ಸೇರಿದ ಶ್ರೀರಾಮಪುರ ವಿದ್ಯುತ್ ಚಿತಾಗಾರದಲ್ಲಿ ಶವಗಳನ್ನು ಸುಡುವಾಗ ಅದರಿಂದ ಹೊರಬರುವ ಹೊಗೆಯು ಅತ್ಯಂತ ಕೆಟ್ಟ ವಾಸನೆಯಿಂದ ಕೂಡಿದ್ದು ಆ ಸುತ್ತಮುತ್ತಲಿನ ಜನರು ಸಹಿಸಲು ಅಸಾಧ್ಯವಾಗಿರುತ್ತದೆ. ಅಷ್ಟು ಮಾತ್ರವಲ್ಲ ಈ ಕೆಟ್ಟ ವಾಸನೆಯಿಂದಾಗಿ ಸದರಿ ಪ್ರದೇಶದ ಜನರು ಪದೇ ಪದೇ ಕಾಯಿಲೆ ಬೀಳುತ್ತಿದ್ದಾರೆಂಬ ದೂರು ಬಹಳವಾಗಿ ಬರುತ್ತಿದೆ.

ಆದುದರಿಂದ, ಸದರಿ ಚಿತಾಗಾರದ ಹೊಗೆ ಹೋಗುವ ಪೈಪನ್ನು ಇನ್ನೂ ಹೆಚ್ಚು ಎತ್ತರ ಮಾಡಿಸುವುದರ ಜೊತೆಗೆ ಇನ್ನೂ ವೈಜ್ಞಾನಿಕ ರೀತಿಯನ್ನು ಅಳವಡಿಸುವಂತಿದ್ದರೆ ಅದರ ಬಗ್ಗೆ ಕೂಡ ಸೂಕ್ತ ಹಾಗೂ ತೀವ್ರ ಕ್ರಮವನ್ನು ಕೂಡಲೇ ತೆಗೆದುಕೊಂಡು ಈ ಪ್ರದೇಶದ ಜನರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸಬೇಕೆಂದು ಮಾನ್ಯ ನಗರಾಭಿವೃದ್ಧಿ ಸಚಿವರನ್ನು ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.